ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಇ-ಆಡಳಿತ ತರಬೇತಿ 01/2015-16 ದಿನಾಂಕ: 07-12-2015

## ಟಿಪ್ಪಣಿ

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್‌ಗಳಿಗೆ ಇಲಾಖೆಯಿಂದ ಅಭಿವೃದ್ಧಿಪಡಿಸಿದ ಆನ್‌ಲೈನ್ ತಂತ್ರಾಂಶ ಹಾಗೂ ದಿನನಿತ್ಯವಾಗಿ ಉಪಯೋಗಿಸುವ ತಂತ್ರಾಂಶಗಳ ಬಗ್ಗೆ ತರಬೇತಿ ಕಾರ್ಯಕ್ರಮದ ಬಗ್ಗೆ.

**ಉಲ್ಲೇಖ:** ಮಾನ್ಯ ಆಯುಕ್ತರ ಜ್ಞಾಪನ ಸಂಖ್ಯೆ: ಇ-ಆಡಳಿತ01/2015-16 ದಿನಾಂಕ: 05-12-2015.

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಲವಾರು ಆನ್‌ಲೈನ್ ತಂತ್ರಾಂಶಗಳನ್ನು ಅಭಿವೃದ್ಧಿಗೊಳಿಸಲಾಗಿದ್ದು, ದಿನನಿತ್ಯ ಉಪಯೋಗಿಸುವ ತಂತ್ರಾಂಶಗಳನ್ನು ಉಪಯೋಗಿಸುವ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಈಗಾಗಲೇ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು ಜಿಲ್ಲಾ ಪ್ರೋಗ್ರಾಮರ್ ಜೊತೆಗೆ ಈ ಕೆಳಗೆ ನಮೂದಿಸಿದ ದಿನಾಂಗಳಂದು ಶಿಕ್ಷಕರ ಸದನ, 2 ನೇ ಮಹಡಿ ಬೆಂಗಳೂರು ಇಲ್ಲಿ ಹಾಜರಾಗಲು ಈ ಮೂಲಕ ಸೂಚಿಸಲಾಗಿದೆ.

| ಕ್ರ ಸಂ | ವಿಭಾಗ | ದಿನಾಂಕ |
|---|---|---|
| 1 | ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್ | 10-12-2015 ಹಾಗೂ 11-12-2015 |
| 2. | ಧಾರವಾಡ ಹಾಗೂ ಗುಲ್ಬರ್ಗಾ ವಿಭಾಗದ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್ | 14-12-2015 ಹಾಗೂ 15-12-2015 |

ಅದರಂತೆ ಈ ಕೆಳಗೆ ನಮೂದಿಸಿದ ದಿನಾಂಕಗಳಂದು ತರಬೇತಿಗೆ ಅಧಿಕಾರಿಗಳು ಹಾಗೂ ಪ್ರೋಗ್ರಾಮರ್ ಗಳು ಹಾಜರಿರುತ್ತಾರೆ. ಸದರಿ ದಿನಾಂಕಗಳಂದು ಈ ಕೆಳಗೆ ನಮೂದಿಸಿದ ತಂತ್ರಾಂಶಗಳಿಗೆ ಸಂಬಂದಿಸಿದಂತೆ ಸಂಬಂದಪಟ್ಟ ಅಧಿಕಾರಿಗಳು ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ತರಬೇತಿಗೆ ಸಂಬಂದಿಸಿದ ಪ್ರಾತಿಕ್ಷತೆಯೊಂದಿಗೆ ಹಾಜರಾಗಿ ತರಬೇತಿಯನ್ನು ಯಶಸ್ವಿಗೊಳಿಸಲು ಸೂಚಿಸಲಾಗಿದೆ.

| **ಮೊದಲ ದಿನದ ತರಬೇತಿ ಕಾರ್ಯಕ್ರಮದ ವಿವರಗಳು** | | |
|---|---|---|
| 1. | ಸಚಿವಾಲಯವಾಹಿನಿ (ಪತ್ರ ಹಾಗೂ ಕಡತ ನಿರ್ವಹಣೆ ತಂತ್ರಾಂಶ) | ಶ್ರೀಮತಿ. ಶಶಿಕಲಾ.ಕೆ.ಬಿ. ಸಹಾಯಕ ನಿರ್ದೇಶಕರು ಇ-ಆಡಳಿತ<br>ಬೆಳಿಗ್ಗೆ 10.00 ರಿಂದ 12.00 ರವರೆಗೆ |
| 2. | ಹೊಸ ಶಾಲೆಗಳ ಪ್ರಾರಂಭದ ಬಗ್ಗೆ ( 1-5, 6-8, 9-10 ತರಗತಿಗಳಿಗೆ) | ಶ್ರೀ. ಶಿವಕುಮಾರ್ ಪ್ರೋಗ್ರಾಮರ್ ಶ್ರೀಮತಿ. ವಿಜಯ ಅರುಣ ಮತ್ತು ಶ್ರೀ. ವಿಧ್ಯಾಧರ್ ಪ್ರೋಗ್ರಾಮರ್‌ಗಳು<br>ಬೆಳಿಗ್ಗೆ 12.10 ರಿಂದ 1.30 ರವರೆಗೆ |
| 3. | ಆರ್.ಟಿ.ಇ. | ಶ್ರೀ. ಪಾಲಾಕ್ಷಪ್ಪ ಹಾಗೂ ಶ್ರೀ.ಶಿವಕುಮಾರ್ ಮತ್ತು ಶ್ರೀಮತಿ. ವಿಜಯ ಅರುಣ ಪ್ರೋಗ್ರಾಮರ್‌ಗಳು<br>ಮಧ್ಯಾಹ್ನ 2.30 ರಿಂದ 5.30 ರವರೆಗೆ |

| ಎರಡನೇ ದಿನದ ತರಬೇತಿ ಕಾರ್ಯಕ್ರಮದ ವಿವರಗಳು | | |
|---|---|---|
| 4. | ಹೆಚ್.ಆರ್.ಎಂ.ಎಸ್. | ಶ್ರೀ. ಗಂಗಾಧರ ಬಿ. ಕೆ. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಹೆಚ್.ಆರ್.ಎಂ.ಎಸ್ ನೋಡಲ್ ಅಧಿಕಾರಿಗಳು ಮತ್ತು ಶ್ರೀ. ವೆಂಕಟೇಶ ಜಿ.ಎ. ಸಹಾಯಕ ನಿರ್ದೇಶಕರು, ಹೆಚ್.ಆರ್.ಎಂ.ಎಸ್ ಬೆಳಿಗ್ಗೆ 10.00 ರಿಂದ 12-00 ರವರೆಗೆ |
| 5. | ಮಾನ್ಯ ಮುಖ್ಯ ಮಂತ್ರಿಗಳ ಜನತಾ ದರ್ಶನ/ ಇ-ಜನಸ್ಪಂದನ | ಶ್ರೀ. ಅಭಿಲಾಷ್, ಇ-ಜನಸ್ಪಂದನ<br>12.10 ರಿಂದ 1.30 ರವರೆಗೆ |
| 6. | ಎಲ್ಲಾ ಇನ್ನುಳಿದ ತಂತ್ರಾಂಶಗಳು | ಶ್ರೀ. ಶಿವಕುಮಾರ್ ಮತ್ತು ಶ್ರೀಮತಿ. ವಿಜಯ ಅರುಣ ಪ್ರೋಗ್ರಾಮರ್‌ಗಳು<br>2.30 ರಿಂದ 5.30 ರವರೆಗೆ |

" ಮಾನ್ಯ ಆಯುಕ್ತರ ಆದೇಶದಂತೆ "

ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ

1. ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
3. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ/ ಪ್ರೋಗ್ರಾಮರ್ ಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
4. ಸಹಾಯಕ ನಿರ್ದೇಶಕರು(ಆಡಳಿತ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಸದರಿ ತರಬೇತಿ ದಿನಾಂಕಗಳಂದು ಕಾಫಿ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲು ಸೂಚಿಸಿದೆ. (ದಿನಾಂಕ: 10-12-2015 & 11-12-2015 ಗಳಂದು 75 ಜನರಿಗೆ ಹಾಗೂ 14-12-2015 & 15-12-2015 ಗಳಂದು 55 ಜನರಿಗೆ)